**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : ಯೋಜನೆಯಡಿಯಲ್ಲಿ ಬರುವ ಒಟ್ಟು 199 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು 2014–15ನೇ ಸಾಲಿಗೆ ಮುಂದುವರೆಸುವ ಹಾಗೂ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಹಾಗೂ ಲೆಕ್ಕ ಶೀರ್ಷಿಕೆ 2202–03–001–0–01 ಅಡಿಯಲ್ಲಿ 06 ಪ್ರಾದೇಶಿಕ ಕಛೇರಿಗಳ ರಿಜಿಸ್ಟ್ರಾರ್ ಮತ್ತು 10 ಯೋಜನೇತರ ಕಾಲೇಜುಗಳ 10 ಅಧೀಕ್ಷಕರ ಹುದ್ದೆಗಳ ಮುಂದುವರಿಕೆ. ಪರವಾನಗಿ ನೀಡುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ ಇಡಿ 42 ಹೆಚ್‌ಪಿಯು 2013, ದಿ:02–9–2013.
(2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಕಾಶಿಇ 07 ಆಯವ್ಯಯ 2014–15 ದಿನಾಂಕ 06–04–2013.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಒಟ್ಟು 195 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು 2013–14ನೇ ಸಾಲಿಗೆ ಮುಂದುವರೆಸುವ ಹಾಗೂ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಮುಂದುವರಿಸಲು ಪರವಾನಗಿ ನೀಡಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರ ಪತ್ರದಲ್ಲಿ ಯೋಜನೆಯಡಿಯಲ್ಲಿ ಬರುವ ಒಟ್ಟು 199 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು 2014–15ನೇ ಸಾಲಿಗೆ ಮುಂದುವರೆಸಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಹಾಗೂ ಲೆಕ್ಕ ಶೀರ್ಷಿಕೆ 2202–03–001–0–01 ಅಡಿಯಲ್ಲಿ 06 ಪ್ರಾದೇಶಿಕ ಕಛೇರಿಗಳ ರಿಜಿಸ್ಟ್ರಾರ್ ಮತ್ತು ಲೆಕ್ಕ ಶೀರ್ಷಿಕೆ 2202–03–103–2–01 ಅಡಿಯಲ್ಲಿ 10 ಯೋಜನೇತರ ಕಾಲೇಜುಗಳ 10 ಅಧೀಕ್ಷಕರ ಹುದ್ದೆಗಳ ಮುಂದುವರಿಕೆ ಪರಪಾನಗಿ ನೀಡುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ ಇಡಿ 28 ಹೆಚ್‌ಪಿಸಿ 2014 ಬೆಂಗಳೂರು,ದಿನಾಂಕ: 31–05–2014</u>

ಯೋಜನೆಯಡಿಯಲ್ಲಿ ಬರುವ ಒಟ್ಟು 199 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಹಾಗೂ 6 ರಿಜಿಸ್ಟ್ರಾರ್ ಮತ್ತು 10 ಯೋಜನೇತರ ಕಾಲೇಜುಗಳ 10 ಅಧೀಕ್ಷಕರ ಹುದ್ದೆಗಳನ್ನು 2014–15ನೇ ಸಾಲಿಗೆ ಮುಂದುವರೆಸಲು ಕಾಲೇಜು ಶಿಕ್ಷಣ ಆಯುಕ್ತರಿಗೆ ಅನುಮೋದನೆ ನೀಡಲಾಗಿದೆ. ಹಾಗೂ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಮುಂದುವರಿಕೆ ಪರವಾನಗಿಯನ್ನು ಪ್ರಾಂಶುಪಾಲರುಗಳಿಗೆ ಡ್ರಾಯಿಂಗ್ ಕೋಡ್ ನೀಡಿ ಅಧಿಕಾರ ಪತ್ರದ ಜೊತೆ ಖಜಾನೆಗೆ ಸೂಚಿಸಲು ಮಹಾಲೇಖಪಾಲರನ್ನು ಕೋರುವಂತೆ ತಿಳಿಸಲಾಗಿದೆ.

18/6 2014

ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ಶಿಇ 384 ಐಎಫ್‌ಎಸ್ 2014 ದಿನಾಂಕ: 06-05-2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

21/5/14

---

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ:07:ಆಯವ್ಯಯ:2014-15

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು.ದಿನಾಂಕ:24-06-2014.

ಮೇಲಿನ ಸರ್ಕಾರದ ಆದೇಶವನ್ನು ಕೆಳಕಂಡವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ. ಹಾಗೂ ಸದರಿ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಖಜಾನೆಗೆ ತಪ್ಪದೇ ಸಲ್ಲಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

1) ಮೇಲ್ಕಂಡ ಯೋಜನೆಯಡಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ , ಯೋಜನಾ ಅಧೀಕ್ಷಕರ ಹುದ್ದೆಗಳಿರುವ ಯೋಜನೇತರ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ಯೋಜನೆಯಡಿಲ್ಲಿ ಮಂಜೂರಾದ 06 ರಿಜಿಸ್ಟ್ರಾರ ಹುದ್ದೆಗಳಿರುವ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

2) ಕಛೇರಿ ಪ್ರತಿ